ಆಶ್ರಮ ಶಾಲೆಗಳಲ್ಲಿ ಸಿಬ್ಬಂದಿ ಕೊರತೆ

425(1059); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ರಾಜ್ಯದಲ್ಲಿರುವ ಆಶ್ರಮಶಾಲೆಗಳ ಸಂಖ್ಯೆ ಎಷ್ಟು; ಮಕ್ಕಳ ಕೊರತೆಯಿಂದ ಮುಚ್ಚಲಿರುವ ಆಶ್ರಮಶಾಲೆಗಳೆಷ್ಟು (ಜಿಲ್ಲಾವಾರು ವಿವರ ಒದಗಿಸುವುದು)

ಆ) ಆಶ್ರಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಾಲಕ ಬಾಲಕಿಯರ ಸಂಖ್ಯೆ ಎಷ್ಟು; ಈ ಆಶ್ರಮಶಾಲೆಗಳು ಮೂಲಭೂತ ಸೌಲಭ್ಯಗಳ ಕೊರತೆಯಿಂದ ಬಳಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಯ ಪರಿಹಾರಕ್ಕೆ ಕೈಗೊಂಡ ಕ್ರಮಗಳೇನು;

ಇ) ಶಾಲೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕೊರತೆ ಇದೆಯೇ; ಅದರ ಪ್ರಮಾಣ ಎಷ್ಟು; ಅಂಕಿ ಅಂಶಗಳನ್ನು ನೀಡುವುದು?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ ಒಟ್ಟು 116 ಆಶ್ರಮಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸಕ್ತ ಸಾಲಿನಲ್ಲಿ ಮಕ್ಕಳ ಕೊರತೆಯಿಂದ ಆಶ್ರಮಶಾಲೆಗಳನ್ನು ಮುಚ್ಚಿರುವುದಿಲ್ಲ. (ಹಾಲಿ ಕಾರ್ಯನಿರ್ವಹಿಸುತ್ತಿರುವ ಆಶ್ರಮಶಾಲೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ಆ) ಈ ಆಶ್ರಮಶಾಲೆಗಳಲ್ಲ 9409 ಬಾಲಕ ಹಾಗೂ ಬಾಲಕಿಯರು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಹೌದು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ 116 ಆಶ್ರಮಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳ ಪೈಕಿ 105

ಆಶ್ರಮಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನೊಳಗೊಂಡ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಉಳಿದ 11 ಆಶ್ರಮಶಾಲೆಗಳ ಪೈಕಿ 08 ಆಶ್ರಮಶಾಲೆಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತವೆ. ಇನ್ನುಳಿದ 03 ಆಶ್ರಮಶಾಲೆಗಳ ಪೈಕಿ 02 ಆಶ್ರಮಶಾಲೆಗಳಿಗೆ ಸೂಕ್ತವಾದ ನಿವೇಶನಗಳು ದೊರಕಿದ್ದು, ಮೂಲಭೂತ ಸೌಕರ್ಯಗಳನ್ನೊಳಗೊಂಡ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ. ಇನ್ನುಳಿದ 01 ಆಶ್ರಮಶಾಲೆಗೆ ನಿವೇಶನವನ್ನು ಇಲಾಖೆಯ ಹೆಸರಿಗೆ ಪಡೆದು ಮೂಲಭೂತ ಸೌಕರ್ಯಗಳನ್ನೊಳಗೊಂಡ ಸ್ವಂತ ಕಟ್ಟಡ ನಿರ್ಮಿಸಲು ಕ್ರಮವಹಿಸಲಾಗುವುದು.

ಇ) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಆಶ್ರಮಶಾಲೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಕೊರತೆ ಇದ್ದು, ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಹುದ್ದೆ	ಮಂಜೂರಾತಿ	ಭರ್ತಿ (ಖಾಯಂ)	ಹೊರಸಂಪನ್ಮೂಲ	ಖಾಲಿ
1	ಶಿಕ್ಷಕರು	500	150	286	64
2	ಅಡಿಗೆಯವರು	393	150	232	11
3	ಅಡುಗೆ ಸಹಾಯಕರು	228	63	125	40
	ಒಟ್ಟು	**1121**	**363**	**643**	**115**

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಚೆಲುವರಾಯಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1059ಕ್ಕೆ ಅನುಬಂಧ

ಕ್ರ.ಸಂ.	ಜಿಲ್ಲೆಯ ಹೆಸರು	ಆಶ್ರಮಶಾಲೆಗಳು	ಮಂಜೂರಾತಿ ಸಂಖ್ಯೆ
1	ಬೆಂಗಳೂರು ನಗರ	1	125
2	ಬೆಂಗಳೂರು ಗ್ರಾ	0	0
3	ರಾಮನಗರ	6	400
4	ಕೋಲಾರ	0	0
5	ಚಿಕ್ಕಬಳ್ಳಾಪುರ	3	375
6	ತುಮಕೂರು	3	375
7	ಚಿತ್ರದುರ್ಗ	2	250
8	ದಾವಣಗೆರೆ	2	175
9	ಶಿವಮೊಗ್ಗ	2	225
10	ಮೈಸೂರು	21	3150
11	ಚಾಮರಾಜನಗರ	19	2350
12	ಉಡುಪಿ	4	460
13	ಚಿಕ್ಕಮಗಳೂರು	12	1150

14	ದಕ್ಷಿಣ ಕನ್ನಡ	12	1075
15	ಕೊಡಗು	12	1825
16	ಹಾಸನ	0	0
17	ಮಂಡ್ಯ	1	50
18	ಬೆಳಗಾಂ	3	375
19	ಬಿಜಾಪುರ	1	100
20	ಧಾರವಾಡ	0	0
21	ಉತ್ತರಕನ್ನಡ	0	0
22	ಬಾಗಲಕೋಟೆ	0	0
23	ಗದಗ್	1	125
24	ಹಾವೇರಿ	2	250
25	ಗುಲ್ಬರ್ಗಾ	0	0
26	ಯಾದಗೀರ್	1	100
27	ಬಳ್ಳಾರಿ	3	375
28	ಬೀದರ್	1	125
29	ರಾಯಚೂರು	2	250
30	ಕೊಪ್ಪಳ	2	250
	ಒಟ್ಟು	116	13835